# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಸ್ ನಿರಂಜನ, ಸಹಾಯಕ ಇಂಜಿನಿಯರ್, ಪಂ.ರಾ.ಇಂ. ಉಪವಿಭಾಗ, ಯಾದಗಿರಿ ಇವರ ವಿರುದ್ಧದ ಆರೋಪಗಳಿಗೆ ಅನುಗುಣವಾಗಿ ವಿಧಿಸಿರುವ ದಂಡನೆಯ ವಿರುದ್ಧ ಮಾನ್ಯ ನ್ಯಾಯ ಮಂಡಳಿಯು ನೀಡಿರುವ ಆದೇಶದ ಬಗ್ಗೆ- ಅಂತಿಮ ಆದೇಶ.

**ಓದಲಾಗಿದೆ:**
1. ಸರ್ಕಾರದ 2ನೇ ಕಾರಣ ಕೇಳುವ ನೋಟಿಸ್ ದಿನಾಂಕ :11.07.2019.
2. ಸರ್ಕಾರದ ಆದೇಶ ಸಂ: ಗ್ರಾಅಪ 07 ಇಎನ್‌ಕ್ಯೂ 2014, ದಿನಾಂಕ:21.12.2020.
3. ಮಾನ್ಯ ನ್ಯಾಯ ಮಂಡಳಿಯ ಮಧ್ಯಾಂತರ ಆದೇಶ ದಿನಾಂಕ: **26.02.2021.**
4. ಮಾನ್ಯ ನ್ಯಾಯ ಮಂಡಳಿಯ ಅಂತಿಮ ಆದೇಶ ದಿನಾಂಕ: **03.07.2021.**

***

**ಪ್ರಸ್ತಾವನೆ :**

ಯಾದಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದಲ್ಲಿ 2011-2014ರ ಅವಧಿಯಲ್ಲಿ ಸ್ವಂತ ಚೆಕ್ ಮೂಲಕ ಹಣ ಪಡೆದು ಕಾಮಗಾರಿ ನಿರ್ವಹಿಸಿದ ಶಾಖಾಧಿಕಾರಿಗಳು ಸ್ವೀಕೃತಿ ಪಡೆಯದೇ ನಗದು ವಿತರಿಸಿರುವುದು ಶಾಸನಬದ್ಧ ಕಡಿತಗಳನ್ನು ಕಟಾಯಿಸದೇ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುತ್ತಾರೆಂಬ ಆರೋಪಕ್ಕೆ ಸಂಬಂಧಿಸಿದಂತೆ ಒಟ್ಟು 18 ಅಧಿಕಾರಿ/ನೌಕರರುಗಳ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗಿದೆ. ಸದರಿ ಇಲಾಖಾ ವಿಚಾರಣೆಯನ್ನು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಸಂಗಪ್ಪ ಎನ್. ಗದ್ದಿ ಇವರಿಗೆ ವಹಿಸಲಾಗಿದ್ದು, ವಿಚಾರಣಾ ಅಧಿಕಾರಿ ಯವರು ಪ್ರತಿ ಆರೋಪಿತರ ಕುರಿತು ವಿಚಾರಣೆ ನಡೆಸಿ, ಆರೋಪಿತರ ಪೈಕಿ ಶ್ರೀ ನೀಲಕಂಠಪ್ಪ, ಕಿ.ಇಂ., ಇವರು ಮರಣ ಹೊಂದಿರುವುದರಿಂದ ಅವರನ್ನು ಸದರಿ ವಿಚಾರಣೆಯಿಂದ ಕೈ ಬಿಟ್ಟು ಉಳಿದ 17 ಜನ ಆಪಾದಿತರುಗಳ ಕುರಿತಂತೆ ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳು ಸಾಬೀತಾಗಿಲ್ಲವೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರೆ, ಸದರಿ ಪ್ರಕರಣದಲ್ಲಿ ಗುತ್ತಿಗೆದಾರರಿಂದ ಶೇಕಡ 2ರಷ್ಟು ಆದಾಯ ತೆರಿಗೆಯನ್ನು ವಸೂಲು ಮಾಡುವುದು ಕಡ್ಡಾಯವಾಗಿದ್ದರೂ ಸಹ ಈ ಅಂಶವನ್ನು ಸಮಗ್ರವಾಗಿ ಪರಿಗಣಿಸದೇ ವಿಚಾರಣಾಧಿಕಾರಿಯವರು ಸಲ್ಲಿಸಿದ್ದ ವಿಚಾರಣಾ ವರದಿಯನ್ನು ಒಪ್ಪದೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ಎ ರನ್ವಯ ಪ್ರಕರಣವನ್ನು ಪುನರ್ ಪರಿಶೀಲಿಸಿ ಆಪಾದಿತರ ವಿರುದ್ಧದ ಆರೋಪಗಳು ಸಾಬೀತಾಗಿದೆಯೆಂದು ಶಿಸ್ತು ಪ್ರಾಧಿಕಾರವು ದಾಖಲಿಸಿ, ಆರೋಪವು ಸಾಬೀತಾಗಿರುವ ಕುರಿತಂತೆ ಎರಡನೇ ಕಾರಣ ಕೇಳುವ ನೋಟೀಸ್ ನಲ್ಲಿ ಸ್ಪಷ್ಟಪಡಿಸಿ, 17 ಜನ ಆಪಾದಿತರುಗಳಿಗೆ ಮೇಲೆ ಓದಲಾದ ಉಲ್ಲೇಖಿತ (1)ರ ದಿನಾಂಕ:11.07.2019ರಂದು ಕಾರಣ ಕೇಳುವ ನೋಟಿಸ್ ನ್ನು ಜಾರಿ ಮಾಡಿ ಅವರುಗಳಿಂದ ವಿವರಣೆಯನ್ನು ಪಡೆದು ಪರಿಶೀಲಿಸಲಾಗಿ, ಸದರಿಯವರ ಹೇಳಿಕೆಗಳು ಪರಿಗಣನೆಗೆ ಪೂರಕವಾಗಿಲ್ಲದ ಕಾರಣ, ಸಾಬೀತಾದ ಆರೋಪಗಳಿಗನುಗುಣವಾಗಿ ಆಪಾದಿತರುಗಳ ವಿರುದ್ಧ ಮೇಲೆ ಓದಲಾದ ಉಲ್ಲೇಖಿತ (2)ರ ದಿನಾಂಕ: 21.12.2020ರ ಆದೇಶದಲ್ಲಿ ದಂಡನೆಯನ್ನು ವಿಧಿಸಲಾಗಿತ್ತು. ಈ ಆಪಾದಿತರ ಪೈಕಿ ಒಬ್ಬರಾದ ಶ್ರೀ ಎಸ್ ನಿರಂಜನ್, ಸಹಾಯಕ ಇಂಜಿನಿಯರ್ ಅವರಿಂದ ರೂ.2,10,124/-ಗಳನ್ನು ವಸೂಲಿ ಮಾಡಲು ಆದೇಶಿಸಲಾಗಿತ್ತು.

ಸರ್ಕಾರದ ಸದರಿ ದಂಡನಾ ಆದೇಶವನ್ನು ಪ್ರಶ್ನಿಸಿ ಆಪಾದಿತ ನೌಕರರಾದ ಶ್ರೀ ಎಸ್ ನಿರಂಜನ್, ಸಹಾಯಕ ಇಂಜಿನಿಯರ್ ರವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 955/2021ನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ವಿಚಾರಣೆ ನಡೆಸಿದ ಮಾನ್ಯ ನ್ಯಾಯ ಮಂಡಳಿಯು ಶ್ರೀ ಎಸ್ ನಿರಂಜನ, ಸಹಾಯಕ ಇಂಜಿನಿಯರ್ ಇವರಿಗೆ ವಿಧಿಸಿದ ಸರ್ಕಾರದ ದಿನಾಂಕ:21.12.2020ರ ದಂಡನಾ ಆದೇಶವನ್ನು ರದ್ದುಪಡಿಸಿ ಅವರಿಗೆ ನೀಡಬೇಕಾದ ಎಲ್ಲಾ ಸವಲತ್ತುಗಳನ್ನು ನೀಡಲು ಆದೇಶಿಸಿರುತ್ತದೆ. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಈ ರೀತಿ ನಿರ್ಣಯ ಕೈಗೊಳ್ಳಲು ಪರಿಗಣಿಸಿರುವ ಅಂಶಗಳೆಂದರೆ ಶಿಸ್ತು ಪ್ರಾಧಿಕಾರವು ಆಪಾದಿತರಿಗೆ ಜಾರಿ ಮಾಡಿರುವ ಎರಡನೇ ಕಾರಣ ಕೇಳುವ ನೋಟೀಸಿನಲ್ಲಿ ಯಾವುದೇ ಸಮಂಜಸ ಕಾರಣಗಳನ್ನು ದಾಖಲಿಸಿಲ್ಲವೆಂದು, ಸಾಕ್ಷಿಗಳ ಹೇಳಿಕೆ ಆಪಾದಿತರ ಪರವಾಗಿದೆಯೆಂದು ಹಾಗೂ ದಂಡನಾದೇಶವು ಕಾನೂನಿನ ದೃಷ್ಠಿಯಿಂದ ಊರ್ಜಿತವಾಗುವುದಲ್ಲವೆಂದು ಅಭಿಪ್ರಾಯಪಟ್ಟು ಉಲ್ಲೇಖಿತ (4) ರ ದಿನಾಂಕ:03.07.2021ರಂದು ನೀಡಿರುವ ತೀರ್ಪಿನಲ್ಲಿ ಸದರಿ ನೌಕರರ ವಿರುದ್ಧ ವಿಧಿಸಿದ ದಂಡನಾದೇಶವನ್ನು ರದ್ದುಪಡಿಸಿರುತ್ತದೆ.

ಸರ್ಕಾರವು ಮಾನ್ಯ ನ್ಯಾಯ ಮಂಡಳಿಯು ನೀಡಿರುವ ಆದೇಶವನ್ನು ಪರಿಗಣಿಸಿರುತ್ತದೆ. ಸದರಿ ಪ್ರಕರಣದ ಸಮಗ್ರ ವಿವರಗಳನ್ನು ಪರಿಶೀಲಿಸಲಾಗಿ ಇಲಾಖಾ ವಿಚಾರಣೆಯಲ್ಲಿ ಆಪಾದಿತರ ವಿರುದ್ಧದ ಆರೋಪ ಸಾಬೀತಾಗದೇ ಇರುವುದರಿಂದ ಮತ್ತು ವಿಚಾರಣಾಧಿಕಾರಿಯವರ ವರದಿಯನ್ನು ಅಲ್ಲಗಳೆಯಲು ಸಾಕಷ್ಟು ಸಾಕ್ಷ್ಯಾಧಾರಗಳ ಕೊರತೆ ಇರುವುದರಿಂದ ಹಾಗೂ ಸದರಿ ಪ್ರಕರಣವು ಮೇಲ್ಮನವಿ ಸಲ್ಲಿಸಲು ಅರ್ಹ ಪ್ರಕರಣವಾಗಿರುವುದಿಲ್ಲವೆಂದು ಸರ್ಕಾರಿ ವಕೀಲರು ಅಭಿಪ್ರಾಯಪಟ್ಟಿರುವುದರಿಂದ ಮಾನ್ಯ ಆಡಳಿತ ನ್ಯಾಯ ಮಂಡಳಿಯು ನೀಡಿರುವ ಆದೇಶವನ್ನು ಒಪ್ಪಿ ಶ್ರೀ ಎಸ್ ನಿರಂಜನ್, ಸಹಾಯಕ ಇಂಜಿನಿಯರ್ ಇವರಿಗೆ ಸೀಮಿತವಾಗಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸರ್ಕಾರವು ನಿರ್ಣಯಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 33 ಜಿಪಲ 2021,</u>**

**<u>ಬೆಂಗಳೂರು, ದಿನಾಂಕ: 02.03.2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ಎಸ್ ನಿರಂಜನ್,ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಯಾದಗಿರಿ ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 07 ಇಎನ್‌ಕ್ಯೂ 2014, ದಿನಾಂಕ:21.12.2020ರಲ್ಲಿ ವಿಧಿಸಿರುವ ದಂಡನೆಯನ್ನು ಇವರಿಗೆ ಸೀಮಿತವಾಗಿ ರದ್ದುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

2/3

**(ಕೆ.ನದೀಮ್ ಅಹ್ಮದ್)**
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

2/3

**<u>ಇವರಿಗೆ:</u>**

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ,ವಿಕಾಸ ಸೌಧ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದ) ಕೆ.ಆರ್.ವೃತ್ತ,ಬೆಂಗಳೂರು.

5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ (ನೋಂದಾಯಿತ ಅಂಚೆ ಮುಖಾಂತರ)
6. ಸಂಬಂಧಪಟ್ಟ ನೌಕರರಿಗೆ.

**ಪ್ರತಿಯನ್ನು:**

1. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾ.ಅ.ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು(ಆಡಳಿತ-1), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಶಾಖೆ.
4. ಹೆಚ್ಚುವರಿ ಪ್ರತಿ / ರಕ್ಷಾ ಕಡತ / ಕಂಪ್ಯೂಟರ್ ಸೆಲ್.